ಬೆಳಗಾವಿ ನಗರದ ಕೋಟೆಯ ಅಭಿವೃದ್ಧಿ ಮತ್ತು ಸೌಂದರೀಕರಣ

33 (53) ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ): ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೆಳಗಾವಿ ನಗರದ ಕೋಟೆಯ ಜೀರ್ಣೋದ್ಧಾರ ಮತ್ತು ಸೌಂದರೀಕರಣದ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

ಆ) ಇದ್ದಲ್ಲಿ, ಎಷ್ಟು ಅಂದಾಜು ಮೊತ್ತದ ಪ್ರಸ್ತಾವನೆಯನ್ನು ಸಿದ್ದಪಡಿಸಿದೆ;

ಇ) ಇಲ್ಲವಾದಲ್ಲಿ ಯಾವಾಗ ಪ್ರಸ್ತಾವನೆಯನ್ನು ಸಿದ್ದಪಡಿಸಿ, ಕೋಟೆಯ ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು?

ಶ್ರೀ ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು):

ಅ) ಹೌದು

ಆ) ಸೂಕ್ತ ಪ್ರಸ್ತಾವನೆಯನ್ನು ಸಿದ್ದಪಡಿಸಿ ಸಲ್ಲಿಸಲು ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ ಇವರನ್ನು ಕೋರಲಾಗಿದೆ.

ಇ) ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಬಂದ ನಂತರ ಮುಂದಿನ ಕ್ರಮ ಜರುಗಿಸಲಾಗುವುದು.

ಚಿತ್ರದುರ್ಗ ನಗರಸಭೆಯಲ್ಲಿ ಖಾಲಿ ಇರುವ ಹುದ್ದೆಗಳು

34 (52) ಶ್ರೀ ಬಸವರಾಜನ್.ಎಸ್.ಕೆ (ಚಿತ್ರದುರ್ಗ): ಮಾನ್ಯ ನಗರಾಭಿವೃದ್ಧಿ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಮತ್ತು ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಚಿತ್ರದುರ್ಗ ನಗರಸಭೆಯಲ್ಲಿ ಖಾಲಿ ಹುದ್ದೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಹುದ್ದೆಗಳವಾರು ವಿವರಗಳನ್ನು ನೀಡುವುದು;

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಕ್ರಮ ಕೈಗೊಳ್ಳುವುದೆ;

ಈ) ಹಾಗಿದ್ದಲ್ಲಿ, ಈ ಖಾಲಿ ಹುದ್ದೆಗಳನ್ನು ಯಾವಾಗ ತಂಬಲಾಗುವುದು;

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ನಗರಾಭಿವೃದ್ಧಿ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಮತ್ತು ಬೆಂಗಳೂರು ಜಲಮಂಡಳಿ ಸಚಿವರು):–

ಅ) ಹೌದು

ಆ) ಅನುಬಂಧದಲ್ಲಿ ನೀಡಲಾಗಿದೆ.

ಇ) ಹೌದು

ಈ) ಪ್ರಸ್ತುತ ಖಾಲಿ ಇರುವ ವಿವಿಧ ಹುದ್ದೆಗಳನ್ನು ನೇರ ನೇಮಕಾತಿ / ಬಡ್ತಿ ಮೂಲಕ ಆದ್ಯತಾನುಸಾರ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ – 1

ಸಿ ಅಂಡ್ ಆರ್ ರೂಲ್ಸ್ ಪ್ರಕಾರ ಮಂಜೂರಾದ ಹುದ್ದೆಗಳ ಸಂಖ್ಯೆ ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಖಾಲಿ ಹುದ್ದೆ ಸಂಖ್ಯೆಗಳ ಪಟ್ಟಿ

ಕ್ರ ಸಂ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಮಂಜೂರಾದ ಹುದ್ದೆ	ಮಂಜೂರಾದ ಹುದ್ದೆಯ ಸಂಖ್ಯೆ	ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ	ಷರಾ
1	**2**	**3**	**4**	**5**	**6**	**7**
1	ನಗರಸಭೆ, ಚಿತ್ರದುರ್ಗ	ಪೌರಾಯುಕ್ತರು	1	1	–	
2		ಸಹಾಯಕ ಕಾರ್ಯಪಾಲಕ ಅಭಿಯಂತರರು	1	1	–	
3		ಸೀನಿಯರ್ ಪ್ರೋಗ್ರಾಮರ್	1	1	–	ಹೊರಗುತ್ತಿಗೆ
4		ಸಹಾಯಕ ಅಭೀಯಂತರರು	1	1	–	
5		ಪರಿಸರ ಅಭಿಯಂತರರು	1	1	–	
6		ಲೆಕ್ಕ ಅಧೀಕ್ಷಕರು	1	1	–	
7		ಕಚೇರಿ ವ್ಯವಸ್ಥಾಪಕರು	1	1	–	

8		ಕಂದಾಯ ಅಧಿಕಾರಿಗಳು	1	1	–	
9		ಲೆಕ್ಕಿಗರು	1	–	1	
10		ಕಿರಿಯ ಅಭಿಯಂತರರು	3	3	–	
11		ಹಿರಿಯ ಆರೋಗ್ಯ ನಿರೀಕ್ಷಕರು	3	–	3	
12		ಪ್ರಥಮ ದರ್ಜೆ ಸಹಾಯಕರು	4	3	1	
13		ಕಮ್ಯುನಿಟಿ ಅಫೇರ್ಸ್ ಆಫೀಸರ್	1	1	–	
14		ಶೀಘ್ರಲಿಪಿಗಾರರು	2	1	1	
15		ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು	3	3	–	
16		ಕಂಪ್ಯೂಟರ್ ಆಪರೇಟರ್	3	2	1	ಹೊರಗುತ್ತಿಗೆ
17		ನೀರು ಸರಬರಾಜು ಆಪರೇಟರ್	8	–	8	
18		ಕಿರಿಯ ಆರೋಗ್ಯ ನಿರೀಕ್ಷಕರು	3	3	–	
19		ಎಲೆಕ್ಟ್ರಿಶಿಯನ್ ಗ್ರೇಡ್-I	1	–	1	
20		ಸಮುದಾಯ ಸಂಘಟಕರು	3	2	1	
21		ದ್ವಿತೀಯ ದರ್ಜೆ ಸಹಾಯಕರು	14	17	–	3 ಹೆಚ್ಚುವರಿ
22		ಕರವಸೂಲಿಗಾರರು	9	9	–	

23		ವಾಹನ ಚಾಲಕರು	10	6	4	
24		ಎಲೆಕ್ಟ್ರಿಶಿಯನ್ ಗ್ರೇಡ್-II	1	–	1	
25		ನೀರು ಸರಬರಾಜು ಸಹಾಯಕ ಆಪರೇಟರ್	8	–	8	
26		ಲ್ಯಾಬ್ ಟೆಕ್ನಿಷಿಯನ್	1	–	1	
27		ಸ್ಯಾನಿಟರಿ ಮೇಸ್ತ್ರಿ	9	6	3	
28		ಹೆಡ್ ಗಾರ್ಡನರ್	1	1	–	
29		ಸೀನಿಯರ್ ವಾಲ್ವ್‌ಮ್ಯಾನ್	2	–	2	
30		ಪೌರಕಾರ್ಮಿಕರು	225	88	137	
31		ಜವಾನರು	8	8	–	
32		ಲೋಡರ್ಸ್	24	13	11	
33		ಕ್ಲೀನರ್ಸ್	6	2	4	
34		ಗಾರ್ಡ್‌ನರ್	5	5	–	
35		ಹೆಲ್ಪರ್	50	28	22	